**ದಿನಾಂಕ:29.02.2020 ರಂದು ಬೆಳಿಗ್ಗೆ 11.00 ಗಂಟೆಗೆ ಶ್ರೀ ಎಂ.ಎಸ್.ಶ್ರೀಕರ್ ಭಾ.ಆ.ಸೇ ಆಯುಕ್ತರು ವಾಣಿಜ್ಯ ತೆರಿಗೆ ಇಲಾಖೆ ಬೆಂಗಳೂರು ಹಾಗೂ ಜಿಲ್ಲಾ ಉಸ್ತವಾರಿ ಕಾರ್ಯದರ್ಶಿ, ಬಳ್ಳಾರಿ ರವರ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾಧಿಕಾರಿ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಪ್ರಗತಿ ಪರಿಶೀಲನಾ ( ವಿಡಿಯೋ ಕಾನ್ಫರೆನ್ಸ್ ) ಸಭೆಯ ನಡುವಳಿಗಳು**

ಮಾನ್ಯ ಜಿಲ್ಲಾಧಿಕಾರಿಗಳು ಬಳ್ಳಾರಿ ರವರು ಜಿಲ್ಲಾ ಮಟ್ಟದ ಪ್ರಗತಿ ಪರಿಶಿಲನಾ ಸಭೆಗೆ ಹಾಜರಾದ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸುತ್ತಾ ಮಾನ್ಯ ಆಯುಕ್ತರು ವಾಣಿಜ್ಯ ತೆರಿಗೆ ಇಲಾಖೆ ಬೆಂಗಳೂರು ಹಾಗೂ ಜಿಲ್ಲಾ ಉಸ್ತವಾರಿ ಕಾರ್ಯದರ್ಶಿ, ಬಳ್ಳಾರಿ ರವರಿಗೆ ಸಬೆಯನ್ನು ನಡೆಸಿಕೊಡಲು ಕೋರಿದರು. ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯದ ಕುರಿತು ಪರಿಶೀಲನಾ ಸಭೆ ನಡೆಸಲಾಯಿತು.

**ಜಿಲ್ಲಾಧಿಕಾರಿಗಳು ಪ್ರವಾಹದ ಕುರಿತು ಈ ಕೆಳಕಂಡ ಮಾಹಿತಿಯನ್ನು ಸಭೆಯ ಗಮನಕ್ಕೆ ತಂದರು**

**1}ಜಿಲ್ಲಾಧಿಕಾರಿಗಳು ಪ್ರವಾಹದ ಕುರಿತು ಈ ಕೆಳಕಂಡ ಮಾಹಿತಿಯನ್ನು ಸಭೆಯ ಗಮನಕ್ಕೆ ತಂದರು,**

1) ಪ್ರವಾಹದಿಂದ ಹಾನಿಯಾದ "ಬಿ" ವರ್ಗದ 95 ಮನೆಗಳ ತಳಪಾಯ ಹಂತದ ಜಿ.ಪಿ.ಎಸ್. ಮಾಡುವ ಕಾರ್ಯ ಪ್ರಗತಿಯಲ್ಲಿದ್ದು ಈವರೆಗೆ 46 ಮನೆಗಳ ಜಿ.ಪಿ.ಎಸ್. ಕಾರ್ಯ ಮುಗುದಿದ್ದು ತಹಶೀಲ್ದಾರರು ಅನುಮೋದನೆ ನೀಡಿರುತ್ತಾರೆ ಎಂದು ತಿಳಿಸಿದರು.
2) ಪ್ರವಾಹದಿಂದ ಸೆಪ್ಟಂಬರ್ ಮತ್ತು ಅಕ್ಟೋಬರ್ 2019ರ ತಿಂಗಳಲ್ಲಿ ಹಾನಿಯಾದ ಬೆಳೆಗಳ ಡೇಟಾ ಎಂಟ್ರಿ ಕಾರ್ಯ ಪೂರ್ಣಗೊಳಿಸಲಾಗಿದೆ ಎಂದು ತಿಳಿಸಿದರು.
3) ಪ್ರವಾಹದಿಂದ ಹಾನಿಯಾದ ಶಾಲೆ ಮತ್ತು ಅಂಗನವಾಡಿ ಕಟ್ಟಡಗಳ ಸಂಬಂಧ ಒಟ್ಟು 69 ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು ಇವುಗಳ ಪೈಕಿ 53 ಕಾಮಗಾರಿಗಳು ಪೂರ್ಣಗೊಂಡಿವೆ ಎಂದು ತಿಳಿಸಿದರು.
4) ಜಿಲ್ಲೆಯಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಟ್ಯಾಂಕರ್ ಮುಖಾಂತರ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿಲ್ಲ ಎಂದು ತಿಳಿಸಿದರು.
5) ಪ್ರಸ್ತುತ ಜಿಲ್ಲೆಯಲ್ಲಿ ಯಾವುದೇ ಮೇವು ಬ್ಯಾಂಕ್ ಮತ್ತು ಗೋಶಾಲೆಗಳು ಕಾರ್ಯನಿರ್ವಹಿಸುತ್ತಿಲ್ಲ ಎಂದು ತಿಳಿಸಿದರು.
6) ಮುಂಬರುವ ದಿನಗಳಲ್ಲಿ ಜಿಲ್ಲೆಯಲ್ಲಿ ಕುಡಿಯುವ ನೀರು ತೊಂದರೆ ಉಂಟಾಗುವ ಗ್ರಾಮಗಳನ್ನು ಗುರುತಿಸಲಾಗಿದೆ ಮತ್ತು ಟ್ಯಾಂಕರ್ ಮುಖಾಂತರ ನೀರು ಸರಬರಾಜು ಮಾಡಲು ಟ್ಯಾಂಡರ್ ಕರೆಯಲು ಕ್ರಮ ವಹಿಸಲಾಗಿದೆ ಎಂದು ತಿಳಿಸಿದರು.

**ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡುತ್ತಾ ಈ ಕೆಳಕಂಡ ಸೂಚನೆಗಳನ್ನು ನೀಡಿದರು,**

1) ಹಡಗಲಿ ತಾಲ್ಲೂಕಿನಲ್ಲಿ 81 ಮನೆಗಳು, ಹರಪನಹಳ್ಳಿ ತಾಲ್ಲೂಕಿನಲ್ಲಿ 41 ಮನೆಗಳು, ಸಿರುಗುಪ್ಪ ತಾಲ್ಲೂಕಿನಲ್ಲಿ 05 ಮನೆಗಳು ಮತ್ತು ಬಳ್ಳಾರಿ ತಾಲ್ಲೂಕಿನಲ್ಲಿ 05 ಮನೆಗಳ ಸ್ಥಳ ಪರಿಶೀಲನ ವರದಿ ಕೂಡಲೇ ಸಲ್ಲಿಸಿ ನಿಯಮಾನುಸಾರ ಪರಿಹಾರ ನೀಡಲು ಕ್ರಮ ವಹಿಸುವಂತೆ ಸೂಚಿಸಿದರು.
2) ಪ್ರವಾಹದಿಂದ ಹಾನಿಯಾದ "ಬಿ" ವರ್ಗದ ಮನೆಗಳ ತಳಪಾಯ ಹಂತದ ಜಿ.ಪಿ.ಎಸ್. ಮಾಡುವ ಕಾರ್ಯವನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಸೂಚಿಸಿದರು.
3) ಸರ್ಕಾರದ ಸುತ್ತೋಲೆ ನಂ.ಕಂಇ: 89:ಟಿಎನ್‌ಆರ್:2020, ದಿನಾಂಕ: 26.2.2020 ರಲ್ಲಿ ಸೂಚಿಸಿದಂತೆ 2019-20 ನೇ ಸಾಲಿನಲ್ಲಿ ಪ್ರವಾಹದಿಂದ ಉಂಟಾದ ಬೆಳೆ ಹಾನಿಗೆ ನೀಡಲಾಗಿರುವ ಇನ್‌ಪುಟ್ ಸಬ್ಸಿಡಿ ಕುರಿತು ಭೂಮಿ ಉಸ್ತುವಾರಿ ಕೇಂದ್ರದಿಂದ ತಾಲ್ಲೂಕುವಾರು ಮತ್ತು ರೈತರವಾರು ತಯಾರಿಸಿ ಕಳುಹಿಸಿರುವ ಪಟ್ಟಿಯಲ್ಲಿನ ಪ್ರಕರಣಗಳ ಬಗ್ಗೆ ಕಂದಾಯ ಇಲಾಖೇತರ ಅಧಿಕಾರಿಗಳ ನೇತೃತ್ವದಲ್ಲಿ

ತಂಡ ರಚಿಸಿ, ನಿಯಮಾನುಸಾರ ಪರಿಶೀಲಿಸಿ, ಕೂಡಲೇ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ಸೂಚಿಸಿದರು.

4) ಜಿಲ್ಲೆಯಲ್ಲಿ ಕುಡಿಯುವ ನೀರನ್ನು ಟ್ಯಾಂಕರ್ ಮೂಲಕ ಸರಬರಾಜು ಮಾಡುವ ಸಮಯದಲ್ಲಿ ಸರ್ಕಾರದಿಂದ ಹೊಸದಾಗಿ ಹೊರಡಿಸಿದ "Mobile Tanker App" ಮುಖಾಂತರವೆ ನಿರ್ವಹಿಸಲು ಕ್ರಮ ವಹಿಸುವಂತೆ ಸೂಚಿಸಿದರು.

5) ಎಸ್.ಡಿ.ಆರ್.ಎಫ್. ನಿಧಿಯಡಿ ಕೈಗೊಂಡ ಅಂಗನವಾಡಿ ಮತ್ತು ಶಾಲೆಗಳ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ತುರ್ತಾಗಿ ಪೂರ್ಣಗೊಳಿಸಿ ಆರ್ಥಿಕ ಪ್ರಗತಿ ಸಾಧಿಸಲು ಸೂಚಿಸಿದರು.

## 2} ಬಳ್ಳಾರಿ ಜಿಲ್ಲೆಯ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳ ವಿವರಗಳು

ಬಳ್ಳಾರಿ ಜಿಲ್ಲೆಯಲ್ಲಿ ಒಟ್ಟು 73 ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳಿದ್ದು 73 ಯೋಜನೆಗಳ ಪೈಕಿ 67 ಯೋಜನೆಗಳು ಪೂರ್ಣಗಂಡಿದ್ದು ಇನ್ನೂಳಿದ 6 ಯೋಜನೆಗಳು ಪ್ರಗತಿಯಲ್ಲಿರುತ್ತವೆ,

**ಸದರಿ 6 ಯೋಜನೆಗಳ ವಿವರಗಳು:**

1. **ನೆಲ್ಲುಡಿ ಮತ್ತು ಇತರೆ 6 ಗ್ರಾಮಗಳಿಗೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆ:** ಸದರಿ ಯೋಜನೆಯು ಹಲವು ಕಾರಣಗಳಿಂದ ಪೂರ್ಣಗೊಂಡಿರುವುದಿಲ್ಲ ಆದ್ದರಿಂದ ಟೆಂಡರ್‌ನ್ನು ರದ್ದುಗೊಳಿಸಿ ಉಳಿದ Component ಗಳಿಗೆ ಪರಿಷ್ಕೃತ ಅಂದಾಜು ಪಟ್ಟಿ ತಯಾರಿಸುವ ಹಂತದಲ್ಲಿದ್ದು, ಅನುಮೋದನೆ ಪಡೆದು ಟೆಂಡರ್ ಕರೆಯಲಾಗುವುದು.
2. **ಬುಕ್ಕಸಾಗರ ಮತ್ತು ಇತರೆ 3 ಗ್ರಾಮಗಳಿಗೆ**
3. **ದೇವಸಮುದ್ರ ಮತ್ತು ಇತರೆ 3 ಗ್ರಾಮಗಳಿಗೆ:**

   ಸದರಿ ಯೋಜನೆಗಳ ಎಲ್ಲಾ Component ಗಳು ಪೂರ್ಣಗೊಂಡಿದ್ದು 2.00 ಕಿ.ಮೀ ರಷ್ಟು ಉದ್ದದ ಪೈಪ್‌ಲೈನ್ ಕಾಮಗಾರಿ ಬಾಕಿ ಇರುತ್ತದೆ, ಸದರಿ 2.00 ಕಿ.ಮೀ ಅರಣ್ಯ ವಲಯದಲ್ಲಿರುವುದರಿಂದ ಅರಣ್ಯ ಇಲಾಖೆಯ (Stage-2) ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.ಅನುಮೋದನೆ ದೊರೆತ ತಕ್ಷಣ ಕಾಮಗಾರಿಯನ್ನು ಪೂರ್ಣಗೊಳಿಸಿ ಕಾರ್ಯಗತಗೊಳಿಸಲಾಗುವುದು.
4. **ಉಜ್ಜನಿ ಮತ್ತು ಇತರೆ 216 ಗ್ರಾಮಗಳಿಗೆ:** ಸದರಿ ಯೋಜನೆಗಳ ಎಲ್ಲಾ Component ಗಳು ಪೂರ್ಣಗೊಂಡಿದ್ದು, ಪಾವಗಡ DBOT ಯೋಜನೆಯೊಂದಿಗೆ ಸಂಯುಕ್ತಗೊಳಿಸಿ ರೂಪುರೇಖೆಯಲ್ಲಿ ಬದಲಾವಣೆ ಮಾಡಿ ಅನುಮೋದನೆ ಪಡೆಯಲಾಗಿದೆ, ಕಾಮಗಾರಿಯನ್ನು ಪೂರ್ಣಗೊಳಿಸಿ ಕಾರ್ಯಗತಗೊಳಿಸಲಾಗುವುದು.
5. **ಹರಕನಾಳು ಮತ್ತು ಇತರೆ 29 ಗ್ರಾಮಗಳಿಗೆ:** ಸದರಿ ಯೋಜನೆಗಳ ಎಲ್ಲಾ Component ಗಳು ಪೂರ್ಣಗೊಂಡಿದ್ದು, Trial Run ಪ್ರಗತಿಯಲ್ಲಿರುತ್ತದೆ.
6. **ತೆಲಿಗಿ ಮತ್ತು ಇತರೆ 56 ಗ್ರಾಮಗಳಿಗೆ:** ಸದರಿ ಯೋಜನೆಗಳ ಎಲ್ಲಾ Component ಗಳು ಪೂರ್ಣಗೊಂಡಿದ್ದು 2 GLSR ಕಾಮಗಾರಿ ಬಾಕಿ ಇರುತ್ತದೆ, ಸದರಿ GLSR ಸ್ಥಳವು ಅರಣ್ಯ ವಲಯದಲ್ಲಿರುವುದರಿಂದ ಅರಣ್ಯ ಇಲಾಖೆಯಿಂದ (Stage-2) ಅನುಮೋದನೆ ಪಡೆಯಲಾಗಿದೆ. ಕರಾರು ಒಪ್ಪಂದ ಮಾಡಿಕೊಂಡು ಕಾಮಗಾರಿಯನ್ನು ಪೂರ್ಣಗೊಳಿಸಿ ಕಾರ್ಯಗತಗೊಳಿಸಲಾಗುವುದು.

**ಈಗಾಗಲೇ 67 ಯೋಜನೆಗಳನ್ನು ಕಾರ್ಯಗತಗೊಳಿಸಿದ್ದು, ಅದರಲ್ಲಿ 3 ಯೋಜನೆಗಳು ಸುಸ್ಥಿತಿಯಲ್ಲಿರುವುದಿಲ್ಲ,**

**ಸದರಿ 3 ಯೋಜನೆಗಳ ವಿವರಗಳು:**